ಅನುರೂಪನಾದ ವರ ಎಂದು ಅನ್ನಿಸಿ, ಅವಳು ಜಯಸಿಂಹನ ಬಳಿ ಬಂದು, ‘ರಾಜಕುಮಾರ, ನಮ್ಮ ಹುಡುಗಿಗೆ ನಿನ್ನ ಮೇಲೆ ತುಂಬಾ ಮನಸ್ಸಾಗಿದೆ. ನೀನು ಇಲ್ಲೇ ಇರುತ್ತೇನೆಂದು ಹೇಳಿ ಅವಳನ್ನು ಮದುವೆ ಮಾಡಿಕೊ. ಮದುವೆ ದಿನ ಎಲ್ಲರೂ ಸಂಭ್ರಮಾಚರಣೆಯಲ್ಲಿರುವಾಗ ಸಮಯ ಸಾಧಿಸಿ, ನೀನು ಅವಳನ್ನು ನಿನ್ನ ದೇಶಕ್ಕೆ ಕರೆದುಕೊಂಡು ಹೊರಟುಬಿಡು. ಅದಕ್ಕೆ ಬೇಕಾದ ಸಹಾಯವನ್ನು ನಾನು ಮಾಡಿಕೊಡುತ್ತೇನೆ. ನೀನಿಲ್ಲದೆ ಅವಳು ಬದುಕಲಾರಳು’. ಎಂದಳು. ಮುಂದಿನದೆಲ್ಲವೂ ದಾಸಿಯು ಹೇಳಿದಂತೆಯೇ ನಡೆದು, ಜಯಸಿಂಹನು ರಾಜಕುಮಾರಿಯನ್ನು ಕರೆದುಕೊಂಡು ನದಿ ಮೇಲೆ ಬಂದುಬಿಟ್ಟನು. ಇಬ್ಬರೂ ದಡ ಮುಟ್ಟಿದುದೇ ತಡ ಒಂದು ಅತ್ಯಾಶ್ಚರ್ಯದ ಘಟನೆ ನಡೆಯಿತು. ಮತ್ಸ್ಯ ಕನ್ಯೆಯ ರೂಪದಲ್ಲಿದ್ದ ಸಾಗರಿಕ ಸುಂದರ ಸ್ತ್ರೀಯಾಗಿದ್ದಳು. ಅವಳಿಗೆ ತನ್ನ ಪೂರ್ವಾಶ್ರಮದ ಘಟನೆಗಳೆಲ್ಲಾ ಒಂದೊಂದಾಗಿ ನೆನಪಾಗತೊಡಗಿದವು.

***

ಹಿಂದೆ ಆ ನದಿಯ ದಡದಲ್ಲಿ ಒಬ್ಬ ಬೆಸ್ತ ವಾಸವಾಗಿದ್ದನು. ಅವನಿಗೆ ಅತಿ ಸುಂದರ ಮಗಳಿದ್ದಳು. ರೂಪದ ಬಗ್ಗೆ ಅಹಂಕಾರಿಯಾದ ಅವಳು ಎಲ್ಲರಿಗೂ ತಮಾಷೆ ಮಾಡುತ್ತಾ ಖುಷಿ ಪಡುತ್ತಿದ್ದಳು. ಒಂದು ದಿನ ನದಿ ತಟದಲ್ಲಿ ಮಹಾ ತಪಸ್ವಿಯೊಬ್ಬರು ಧ್ಯಾನ ಮಾಡುತ್ತಿದ್ದಾಗ ಈ ಹುಡುಗಿ ಕಪ್ಪೆಯನ್ನು ಅವರ ಮೇಲೆ ಎಸೆದಳು. ಧ್ಯಾನ ಭಂಗರಾದ ಮುನಿ ಕೋಪದಿಂದ ಕೆಂಡಾಮಂಡಲರಾಗಿ ‘ನೀನು ಇನ್ನು ಮುಂದೆ ಜಲಜಂತುವಾಗಿ ನೀರಿನೊಳಗೆ ವಾಸ್ತವ್ಯ ಹೂಡು ಎಂದು ಶಪಿಸಿದರು. ವಿಷಯ ತಿಳಿದ ಬೆಸ್ತ ಓಡಿ ಬಂದು, ‘ಸ್ವಾಮಿ, ನನಗೆ ಇವಳೊಬ್ಬಳೆ ಮಗಳು ದಯವಿಟ್ಟು ಕ್ಷಮಿಸಿ’ ಎಂದು ಬೇಡಿಕೊಂಡನು.

ಇಲ್ಲ ಕೊಟ್ಟ ಶಾಪವನ್ನು ಹಿಂದೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಬೇಕಾದರೆ ಪರಿಹಾರ ಮಾರ್ಗ ಸೂಚಿಸುತ್ತೇನೆ. ಅವಳನ್ನು ಅದೇ ರೂಪದಲ್ಲಿಯೇ ಯಾರಾದರೂ ಮನುಷ್ಯ ಮದುವೆ ಮಾಡಿಕೊಂಡು, ಅವಳ ಕಾಲಿಗೆ ಭೂಸ್ಪರ್ಶವಾದ ತಕ್ಷಣ ಅವಳಿಗೆ ಮತ್ತೆ ಮುಂಚಿನ ಸ್ಥಿತಿಯು ಪ್ರಾಪ್ತವಾಗುತ್ತದೆ. ಅಲ್ಲಿಯವರೆಗೆ ನೀವು ಕಾಯಲೇಬೇಕು’ ಎಂದ ತಪಸ್ವಿಯ ಮಾತಿನಿಂದ ಬೆಸ್ತನೂ ನಿರಾಶನಾಗಿ ಹೊರಟುಹೋದನು.

ಶಾಪವಿಮೋಚನೆಯಾಗಿ ತನ್ನ ಮೊದಲಿನ ಸೌಂದರ್ಯವನ್ನು ಪಡೆದುಕೊಂಡ ಸಾಗರಿಕ ಆನಂದಿಂದ ತನ್ನ ಕತೆಯನ್ನೆಲ್ಲ ರಾಜಕುಮಾರನಿಗೆ ಹೇಳಿದಳು. ತನ್ನ ಹಿಂದಿನ ವರ್ತನೆಗೆ ಪಶ್ಚಾತ್ತಾಪ ಪಟ್ಟಳು. ಮಗ ಸುಂದರ ಯುವತಿಯೊಡನೆ ಬಂದಿರುವುದನ್ನು ಕೇಳಿದ ಮಹಾರಾಜ ರಾಣಿಯೊಡನೆ ಬಂದು ಮಗ ಸೊಸೆಯನ್ನು ಮೆರವಣಿಗೆ ಮೂಲಕ ಬರಮಾಡಿಕೊಂಡ. ಅರಮನೆಗೆ ಹೋದ ನಂತರ ಮಗನಿಗೆ ರಾಜ್ಯವನ್ನು ವಹಿಸಿಕೊಟ್ಟು, ವಾನಪ್ರಸ್ಥಾಶ್ರಮಕ್ಕೆ ಹೊರಟುಹೋದನು. ■



**ನೀಲ ಎಮ್‌ ಚಿತ್ತರಿಗಿ**

7ನೇ ತರಗತಿ, ಪ್ರೂಡೆನ್ಸ್ ಇಂಟರ್ ನ್ಯಾಷನಲ್ ಶಾಲೆ, ತುಮಕೂರು



**ಕುಂಚ ಪ್ರಪಂಚ**



**ಭರಣಿ ಎ.**

7ನೇ ತರಗತಿ, ಸಿದ್ದಗಂಗಾ ಶಾಲೆ, ಬೆಂಗಳೂರು

